# ತೇರು ತೇರು ತೇರು

■ **ಮಹೇಶ್ವರ ಹುರುಕಡ್ಲಿ ಬಾಚಿಗೊಂಡನಹಳ್ಳಿ**

ಕಲೆ: ಸಂತೋಷ್ ಸಸಿಹಿತ್ಲು

ತೇರು ತೇರು ನಮ್ಮೂರ ತೇರು
ಬಸವಣ್ಣನ ತೇರು ಬಲುಜೋರು

ಜನವೋ ಜನ ಎಲ್ಲೆಲ್ಲಿಯೂ ಜನ
ನನಗಂತೂ ಆಗಲಿಲ್ಲ ದೈವದರ್ಶನ

ನಿರಾಸೆ ನನಗಿಲ್ಲ ತೇರು ಕಾಣದೆಂದು
ಅಪ್ಪ ಜೊತೆಗಿರೆ ಜಗವೆಲ್ಲವೂ ನಂದು

ಅಪ್ಪನ ಕಾಲುಗಳೇ ತೇರಿನ ಗಾಲಿ
ಆತನ ಕಂಗಳು ಮಿಂಚುವ ಗೋಲಿ

ಅಪ್ಪನ ಎದೆಯೇ ಉತ್ಸವ ಮೂರ್ತಿ
ಹೆಗಲಮೇಲೆ ನಾನಿರೇ ಕಳಸಕೀರ್ತಿ

ಅಪ್ಪನುಡುಗೆಯೇ ತೇರಿನ ಸಿಂಗಾರ
ತುಟಿಬಿಚ್ಚಿ ನಗುತ್ತಿದ್ದರದೇ ಬಂಗಾರ

ಅಪ್ಪನ ನಡಿಗೆಯು ತೇರಿನಂತೆ ಸರಳ
ಹಣದಿಂದೋಡದ ಆತನೊಂದು ಹವಳ ■



## ಕುಂಚ ಪ್ರಪಂಚ






ಭರತ್ ರಾವ್
3ನೇ ತರಗತಿ, ಪೂರ್ಣ ಚೇತನ ಪಬ್ಲಿಕ್ ಸ್ಕೂಲ್, ಮೈಸೂರು



ಮಂಥನ್ ಗೌಡ ಡಿ.ಎ
2ನೇ ತರಗತಿ, ಸಾಯಿ ನಳಂದ ಸೆಂಟ್ರಲ್ ಸ್ಕೂಲ್, ಕೆ.ಆರ್. ನಗರ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** **editorsu@sudha.co.in**

